**ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ, ಹೆಚ್.ಡಿ.ಕೋಟೆ**

**ಸಿ.ಸಿ. ನಂ. 54/2022**

**ಸಾಕ್ಷಿಗೆ ದಿನಾಂಕ 08.12.2025 ರಂದು ಪ್ರಮಾಣವಚನ ಬೋಧಿಸಲಾಯಿತು.**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಬಸವರಾಜು | ಪಿ.ಡಬ್ಲ್ಯೂ–10 |
| ತಂದೆಯ/ಗಂಡನ ಹೆಸರು | : | ಸೋಮಯ್ಯ | ಸಿ.ಡಬ್ಲ್ಯೂ– 27 |
| ವಯಸ್ಸು | : | 43 | |
| ಉದ್ಯೋಗ | : | ಪಿ ಐ ಮಳವಳ್ಳಿ ಗ್ರಾಮಾಂತರ ಪೋಲೀಸ್ ಠಾಣೆ | |
| ವಾಸಸ್ಥಳ | : | ಮಳವಳ್ಳಿ | |

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನಾನು ದಿನಾಂಕ 02.07.2021 ರಿಂದ 31.01.2023 ರ ವರೆಗೆ ಹೆಚ್ ಡಿ ಕೋಟೆ ಪೋಲೀಸ್ ಠಾಣೆಯಲ್ಲಿ ಪೋಲೀಸ್ ನಿರೀಕ್ಷರಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 30.11.2021 ರಂದು ಚಾಸಾ 26 ರಿಂದ ಈ ಪ್ರಕರಣದ ಕಡತವನ್ನು ಪಡೆದು ತನಿಖೆಯನ್ನು ಮುಂದುವರಿಸಿರುತ್ತೇನೆ. ಅದೇ ದಿನ ಹೆಚ್ ಡಿ ಕೋಟೆಯ ಸರ್ಕಾರಿ ಆಸ್ಪತ್ರೆಯ ಶವಗಾರಕ್ಕೆ ಬೇಟಿ ನೀಡಿ ಸಾಕ್ಷಿದಾರರಾದ ಚಾಸಾ 2 ಮತ್ತು 3 ರವರ ಸಮಕ್ಷಮ ಮೃತ ಸಹಜಾದ್ ರವರ ಶವ ತನಿಖಾ ವರದಿಯನ್ನು ತಯಾರಿಸಿರುತ್ತೇನೆ. ಶವ ಪಂಚನಾಮೆಯನ್ನು ಬೆಳಿಗ್ಗೆ 10 ರಿಂದ ಮದ್ಯಾಹ್ನ 12 ಗಂಟೆಯ ವರೆಗೆ ಜರುಗಿಸಲಾಗಿರುತ್ತದೆ. ಶವ ಪಂಚನಾಮೆಯ ಕಾಲದಲ್ಲಿ ಹಾಜರಿದ್ದ ಮೃತನ ಮಗಳು ಚಾಸಾ

4 ರವರು ಹಾಜರಿದು ಅವರ ಮಗಳು ಚಾಸಾ 4 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಮೃತನ ಗ್ರಾಮದವರಾದ ಚಾಸಾ 5 ರವರ ಹೇಳಿಕೆಯನ್ನು ಸಹ ದಾಖಲು ಮಾಡಿರುತ್ತೇನೆ. ನಂತರ ವೈದ್ಯರಿಗೆ ಮೃತ ದೇಹದ ಮೇಲೆ ಪೋಸ್ಟ್‌ಮಾರ್ಟಮ್ ಅನ್ನು ಮಾಡಲು ಕೇಳಿಕೊಳ್ಳಲಾಗಿರುತ್ತದೆ. ಅದೆ ದಿನ ಕೃತ್ಯ ನಡೆದ ಸ್ಥಳಕ್ಕೆ ಬೇಟಿ ನೀಡಿ ಪ್ರತ್ಯಕ್ಷ ಸಾಕ್ಷಿದಾರರಾದ ಚಾಸಾ 6 ರವರು ಸ್ಥಳವನ್ನು ತೋರಿಸಿದಂತೆ ಸ್ಥಳದಲ್ಲಿಯೇ ಸ್ಥಳ ಪಂಚನಾಮೆಯನ್ನು ಜರುಗಿಸಿರುತ್ತೇನೆ. ಅದೇ ಸಮಯದಲ್ಲಿ ಚಾಸಾ 7 ಮತ್ತು 8 ರವರು ಸಹ ಹಾಜರಿದ್ದರು. ಅದೇ ಸಮಯದಲ್ಲಿ ಚಾಸಾ 6 ರವರು ಅಪಘಾತಕ್ಕೊಳಪಟ್ಟ ವಾಹನವನ್ನು ತಂದು ಹಾಜರುಪಡಿಸಿದ್ದು ಸದರಿ ವಾಹನವನ್ನು ಅಮಾನತ್ತು ಪಡಿಸಿಕೊಂಡು ಠಾಣಾ ಮಾಲು ಪಟ್ಟಿ ಸಂಖ್ಯೆ 326/2021 ರಂತೆ ಮಾಲು ಪಟ್ಟಿಯನ್ನು ತಯಾರಿಸಿ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಅದೇ ಸಮಯದಲ್ಲಿ ಸ್ಥಳದಲ್ಲಪಿ ಕಚ್ಚಾ ನಾಕಾಶೆಯನ್ನು ತಯಾರಿಸಿ ಅಪಘಾತದಲ್ಲಿ ಬಾಗಿಯಾದ ವಾಹನಗಳ ಪೋಟೋವನ್ನು ತೆಗೆದುಕೊಳ್ಳಲಾಗಿರುತ್ತದೆ. ನಂತರ ದಿಃ 13.12.2021 ರದು ಚಾಸಾ 21 ಮತ್ತು 24 ರವರು ಬಾತ್ಮಿದಾರರ ಮಾಹಿತಿಯ ಮೇರೆಗೆ ಆರೋಪಿಗಳು ಮತ್ತು ಅಪಘಾತ ಪಡಿಸಿದ ವಾಹನದ ನೊಂದಣಿ ಸಂಖ್ಯೆ ಕೆ ಎ 45 ಎ 0075 ವಾಹನವನ್ನು ಮತ್ತು ಅಸಾಮಿಗಳನ್ನು ಪತ್ತೆ ಹಚ್ಚಿ ಠಾಣೆಗೆ ತಂದು ಹಾಜರುಪಡಿಸಿದವರನ್ನು ವಿಚಾರಣೆ ಮಾಡಿ ವಶಕ್ಕೆ ಪಡೆದುಕೊಂಡಿರುತ್ತೇನೆ. ನಂತರ ಸ್ವ ಇಚ್ಚಾ ಹೇಳಿಕೆಗಳನ್ನು ದಾಖಲು ಮಾಡಿ ಆರೋಪಿತರುಗಳನ್ನು ಬಿಡುಗಡೆ ಗೊಳಿಸಿರುತ್ತೇನೆ. ನಂತರ ವಾಹನದ ಅಮಾನತ್ತು ಮಾಹಜರನ್ನು ಬೆಳಿಗ್ಗೆ 11 ರಿಂದ 11.45 ರವರೆಗೆ ಚಾಸಾ 9 ಮತ್ತು 10 ರವರ ಸಮಕ್ಷಮ ಜರುಗಿಸಲಾಗಿರುತ್ತದೆ. ಅದನ್ನು ಠಾಣಾ ಮಾಲು ಪಟ್ಟಿ ಸಂಖ್ಯೆ 346/2021 ರಂತೆ ತಯಾರಿಸಿದ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ನಂತರ ಅದೇ ದಿನ ಆರೋಪಿಯು ಕೃತ್ಯ ನಡೆದ ಸ್ಥಳವನ್ನು ತೋರಿಸಿದ್ದು ಅದೇ ಸ್ಥಳದಲ್ಲ ಪಂಚನಾಮೆಯನ್ನು ಮದ್ಯಾಹ್ನ 2 ರಿಂದ 3 ಗಂಟೆಯವರಗೆ ಸಾಕ್ಷಿದಾರರಾದ ಚಾಸಾ 14 ಮತ್ತು 15 ರವರು ಸಮಕ್ಷಮ ತಯಾರಿಸಲಾಗಿರುತ್ತದೆ. ಅದೇ ದಿನ ಸಾಕ್ಷಿದಾರರಾದ ಚಾಸಾ 6 ಮತ್ತು 13 ರವರ

ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ನಂತರ ದಿಃ 15.12.2021 ರಂದು ಅಪಘಾತಕ್ಕೊಳಾದ ವಾಹನಗಳಾದ ಕೆ ಎ 45 ಎ 0075 ಮತ್ತು ಕೆ ಎ 45 ಇಸಿ 1256 ಗಳನ್ನು ತಪಾಷಣಾ ಮಾಡಿ ವರದಿಯನ್ನು ನೀಡುವಂತೆ ಎ ಆರ್ ಟಿ ಓ ಹುಣಸೂರು ರವರಿಗೆ ಕೋರಿಕೊಂಡಿರುತ್ತೇನೆ. ದಿಃ 16.12.2021 ರಂದು ಮೃತ ಶಹಜಾದ್ ರವರ ಪಿ ಎಂ ವರದಿಯನ್ನು ಹೆಚ್ ಡಿ ಕೋಟೆ ಆಸ್ಪತ್ರೆಯಿಂದ ಪಡೆದುಕೊಂಡಿರುತ್ತೇನೆ. ನಂತರ ದಿಃ 21.12.2021 ರಂದು ಹೆಚ್ ಡಿ ಕೋಟೆ ಆಸ್ಪತ್ರೆ ವೈದ್ಯಾದಿಕಾರಿಗಳು ಮೃತರಿಂದ ಸಂಗ್ರಹಿಸಿದ ಪರಿಕರಗಳನ್ನು ಶೀಲು ಮಾಡಿ ಕಳುಹಿಸಿಕೊಟ್ಟಿದ್ದು ಮಾಲು ಪಟ್ಟಿ ನಂಬರ್ 359/2021 ರಂತೆ ನಮೂದಿಸಿ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡು ಮಾನ್ಯ ನ್ಯಾಯಾಲಯದ ಅನುಮತಿ ಪಡೆದು ಮೈಸೂರಿನ ಆರ್ ಎಪ್ ಎಸ್ ಎಲ್ ಗೆ ಕಳುಹಿಸಲಾಗಿರುತ್ತದೆ. ದಿಃ 05.01.2022 ರಂದು ಎ ಆರ್ ಟಿ ಓ ರವರಿಂದ ವರದಿಯನ್ನು ಪಡೆದುಕೊಂಡಿರುತ್ತೇನೆ. ದಿಃ 20.01.2022 ರಂದು ಮೈಸೂರು ಆರ್ ಎಪ್ ಎಸ್ ಎಲ್ ನಿಂದ ವರದಿಯನ್ನು ಪಡೆದಿರುತ್ತೇನೆ. ದಿಃ 28.01.2022 ರಂದು ಕೆ ಎ 45 ಇ ಸಿ 1256 ರ ಬೈಕ್ ನ ಮಾಲೀಕರಾದ ಮಕ್ ಬುಲ್ ಉನ್ನಿಸ ಬಿನ್ ಶಹಜಾದ್ ರವರಿಗೆ ಐ ಎಂ ಡಿ 133 ರಡಿ ನೋಟೀಸ್ ನೀಡಿ ಸಮಜಾಯಿಸಿ ಯನ್ನು ಪಡೆದುಕೊಂಡಿರುತ್ತೇನೆ. ವಾಹನದ ಇಂಡಿಮ್ನೆಟಿ ಬಾಂಡನ್ನು ಪಡೆದು ವಾಹನದ ಮಾಲೀಕರಿಗೆ ಹಿಂದುರುಗಿಸಲಾಯಿತು. ಚಾಸಾ 12 ಮತ್ತು 16 ರವರ ಸಮಕ್ಷಮ ಮಹಜರ್ ಕ್ರಮವನ್ನು ಜರುಗಿಸಿ ಕೆ ಎ 45 ಎ 0075 ಮಹೇಂದ್ರ ಜಿತೋ ವಾಹನವನ್ನು ಆರ್ ಸಿ ಮಾಲೀಕರಿಗೆ ಬಿಡುಗಡೆ ಮಾಡಲಾಯಿತು. ದಿಃ 28.12.2021 ರಂದು ಕೆ ಎ 45 ಇಸಿ 1256 ರ ಸ್ಕೂಟರನ್ನು ವಾಹನದ ಮಾಲೀಕರಿಗೆ ಇಂಡಿಮ್ನೆಟಿ ಬಾಂಡನ್ನು ಪಡೆದು ಬಿಡುಗಡೆ ಗೊಳಿಸಲಾಯಿತು. ಆರೋಪಿತರು ತಮ್ಮ ಸ್ವ ಇಚ್ಛಾ ಹೇಳಿಕೆಯಲ್ಲಿ ತಿಳಿಸಿದ ಮಾಹಿತಿಯಂತೆ ಪೂನ್ನಂಪೇಟೆ ಮತ್ತು ಗೋಣಿ ಕೊಪ್ಪ ರಸ್ತೆಯಲ್ಲಿರುವ ಚಮ್ಮಡ ಅಯ್ಯಪ ರವರ ಹೆಸರಿನಲ್ಲಿರುವ ಕಾಡ್ಲಾಯಪ್ಪ ಗ್ಯಾರೇಜ್ ನಲ್ಲಿ ದಿಃ 25.03.2022 ರಂದು ಪಂಚರಾದ 11 ಮತ್ತು 12 ರವರ ಸಮಕ್ಷಮ ಬೆಳಿಗ್ಗೆ 11 ರಿಂದ 11.45 ವರೆಗೆ

ಆರೋಪಿತರ ಸಮ್ಮುಖದಲ್ಲಿ ನನ್ನ ಸಮಕ್ಷಮ ಮಹಜರ್ ಕ್ರಮವನ್ನು ಜರುಗಿಸಲಾಯಿತು. ತನಿಖೆ ಪೂರ್ಣಗೊಂಡಿದ್ದು ಆರೋಪಿತರ ವಿರುದ್ಧ ಆರೋಪ ಸಾಬಿತಾದ್ದರಿಂದ ಆರೋಪಿತರ ವಿರುದ್ಧ ದೋಷಾ ರೋಪಣಾ ಪಟ್ಟಿಯನ್ನು ಸಲ್ಲಸಲಾಯಿತು. ಸಾಕ್ಷಿಯು ನಿಪಿ 5 ರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 5 (ಸಿ) ಎಂದು 6 ರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 6 (ಸಿ) ಎಂದು, ಸಾಕ್ಷಿಯ ನಿಪಿ 12 ದಿಃ 13.12.2021 ರಂದು ಆದ ಅಮಾನತ್ತು ಪಂಚನಾಮೆಯಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 12 (ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ 13 ಸ್ಥಳ ಮಹಜರನ್ನು ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ 13(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ 14 ಮತ್ತು 15 ಪೋಟೋಗಳನ್ನು ನೋಡಿ ಗುರುತಿಸಿರುತ್ತಾರೆ. ದಿಃ 1312.2021 ರಂದು ಆದ ಆರೋಪಿ ತೋರಿಸಿದ ಕೃತ್ಯ ನಡೆದ ಸ್ಥಳ ದ ಪಂಚನಾಮೆಯಲ್ಲಿದ್ದ ಸಹಿಯನ್ನು ನೋಡಿ ಗುರುತಿಸಿದ್ದು ಅದು ಈಗಾಗಲೇ ನಿಪಿ 16 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ 16(ಬಿ) ಎಂದು, ಸಾಕ್ಷಿ ಗೆ ನಿಪಿ 17 ಇಂಡಿಮೆ"ನಟಿ ಬಂಡನಲ್ಲಿದ್ದ ಸಹಿಯನ್ನು ನೋಡಿ ಗುರತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ 17(ಬಿ) ಎಂದು ವಾಹನ ಬಿಡುಗಡೆ ಮಹಜರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 19 ಎಂದು ಸಾಕ್ಷಿಯ ಸಹಿಯನ್ನು ನಿಪಿ 19(ಎ) ಎಂದು, ಸಾಕ್ಷಿಯು ನಿಪಿ 3 ಶವತನಿಖೆಯಲ್ಲಿದ್ದ ಸಹಿಯನ್ನು ನೋಡಿ ಗುರುತಿಸಿದ್ದು ನಿಪಿ 3 (ಎ) ಎಂದು, ಸಾಕ್ಷಿಯು ನಿಪಿ 2 ರಲ್ಲಿ ಪಿ ಎಂ ವರದಿಯಲ್ಲಿರುವ ತಮ್ಮ ಸಹಿಯನ್ನು ನೋಡಿ ಗರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ 2(ಎ) ಎಂದು ಸಾಕ್ಷಿಯು ನಿಪಿ 4 ರ ಸಹಿಯನ್ನು ಐ ಎಂ ವಿ ವರದಿಯನ್ನು ನೋಡಿ ಗುರುತಿಸಿದ್ದು ನಿಪಿ 4 ಬ(ಬಿ) ಎಂದು, ಕಲಂ 130 ರ ಡಿ ನೀಡಿದ ನೋಟೀಸನ್ನು ಮತ್ತು ಅದರ ನೀಡಿದ ಉತ್ತರವನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ 20 ಎಂದು ಸಾಕ್ಷಿಯ ಸಹಿಯನ್ನು ನಿಪಿ 20(ಎ) ಮತ್ತು 21 ಎಂದು ಗುರುತಿಸಿಸಲಾಯಿತು ಸಾಕ್ಷಿಯು ನಿಪಿ 4 ನೋಡಿ ಗುರುತಿಸಿಗಿರುತ್ತಾರೆ. ಅಮನಾತ್ತು

ಸಮಯದಲ್ಲಿ ತೆಗೆಯಲಾದ ಅಪಘಾಕ್ಕೊಳಪಟ್ಟ ವಾಹನಗಳನ್ನು ನೋಡಿ ಗುರುತಿಸಿದ್ದು ಅದು ಈಗಾಗಲೇ ನಿಪಿ 8 ಮತ್ತು 9 ಎಂದು ಗುರುತಿಸಲಾಗಿರುತ್ತದೆ. ಅಪಘಾತ ಪಡಿಸಿದ ಮಹೇಂದ್ರ ವಾಹನದ ಪೋಟೋವನ್ನು ನೋಡಿ ಗುರುತಿಸಿದ್ದು ಅದು ಈಗಾಗಲೇ ನಿಪಿ 10 ಮತ್ತು 11 ಎಂದು ಗುರುತಿಸಲಾಗಿರುತ್ತದೆ. ನಿಪಿ 13 ರಲ್ಲಿರುವ ಆರೋಪಿತರ ಸಹಿಗಳನ್ನು ನೋಡಿ ಗುರತಿಸಿರುತ್ತಾರೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರತಿಸಿರುತ್ತಾರೆ.

**ಪಾಟೀ ಸವಾಲು ಆರೋಪಿ ಪರ ವಕೀಲರಿಂದಃ**

ಎ 1 ಅಪಘಾತ ಪಡಿಸಿದ ವ್ಯಕ್ತಿಯಾಗಿರುತ್ತಾನೆ. ಎ.2 ಅಪಘಾತ ಪಡಿಸಿದ ವಾಹನದ ಬಗ್ಗೆ ಠಾಣೆಯಲ್ಲಿ ಮಾಹಿತಿ ನೀಡದೆ ಅದನ್ನು ರಿಪೇರಿ ಜಮಾಡಿಸಿರುತ್ತಾರೆ. ಎ 3 ರವರು ಅಪಘಾತ ದ ಸಮದಲ್ಲಿ ಎ 1 ರವರು ಜೊತೆಯಲ್ಲಿಯೇ ಇದ್ದು ಅಪಘಾತದ ಬಗ್ಗೆ ಮಾಹಿತಿಯನ್ನು ನೀಡಿದೆ ಸಾಕ್ಷಿ ನಾಶ ಮಾಡಲು ಸಹಕರಿಸಿರುತ್ತಾರೆ. ಸದರಿ ವಿಚಾರವನ್ನು ಚಾರ್ಜ್ ಶೀಟ್ ನಲ್ಲಿ ಉಲ್ಲೇಖ ಮಾಡಿಲಾಗಿರುತ್ತದೆ. ನಾನು ಹೇ ಳಿದ ಮಾಹಿತಿಯು ಸುಳ್ಳಿನಿಂದ ಕೂಡಿರುೆತದೆ ಎಂರದೆಸ ರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುಂತಂತೆ ಕೃತ್ಯ ನಡೆದ ಸ್ಥಳ ಕ್ಕೆ ಬೇಟಿ ನೀಡಿರುವುದಿಲ್ಲ ಯಾವುದೇ ವಾಹನವನ್ನು ಅಮಾನತ್ತು ಪಳಿಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಕ್ಷಗಳನ್ನು ಠಾಣೆಯಲ್ಲಿ ಕುಳಿತು ಸೃಷ್ಟಿಸಲಾಗಿರುತ್ತದೆ ಎಂದರೆ ಸರಿಯಲ್ಲ. ಮೃತರ ಕಟುಂಬದವರಿಗೆ ಅಪಘಾತ ದ ಪರಿಹಾದರ ಹಣ ಸಿಗಲಿ ದಾಖಲಾತಿ ಗಳನ್ನು ಸೃಷ್ಟಿ ಮಾಡಿಕೊಂಡು ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಅಪಘಾತ ಪಡಿಸಿದ ವಾಹನವನ್ನು ಗುರತಿಸಲು ಆಗಿರುವುದಿಲ್ಲ ಮತ್ತು ನಾನು ತೋರಿಸಿರುವ ಅಪಘಾತ ದಲ್ಲಿ ಬಾಗಿಯಾಗಿದೆ ಎಂದು ಹೇಳಲಾದ ವಾಹನವು ಈ ಅಪಘಾತಕ್ಕೆ ಸಂಬಂದಿಸಿರುವುದಿಲ್ಲ ಎಂದರೆ ಸರಿಯಲ್ಲ. ಅಪಘಾತ ಸ್ಥಳ ಬಳಿಯಲ್ಲಿದ ಪೆಟ್ರೋಲ್ ಬಂಕ್ ಇತರೆ ಬಿಲ್ಡಿಂಗಳಲ್ಲಿ ಸಿ ಸಿ ಕ್ಯಾಮಾರಗಳನ್ನು ಅಳವಡಿಸಲಾಜಗಿರುೆತತದೆ ಎಂದರೆ ಸಾಕ್ಷಿಯು ಅದು ಘಟನೆಯನ್ನು ಸಾಕ್ಷಿಕರಿಸುವುದಿಲ್ಲ ಎಂದು ನುಡಿಯುತ್ತಾರೆ.

ಅಪಘಾತ ದ  ಸ್ಥಳಕ್ಕೂ ಪೆಟ್ರೋಲ್  ಬಂಕ್   ಸಮಾರು 100 ಮೀಟ್ ಅಂತರ ಇರುತ್ತದೆ. ಪೋಟೋವನ್ನು ಈ ಪ್ರಕರಣಕ್ಕೆ ಅನುಕೂಲವಗುವಂತೆ ನಂತರದಲ್ಲಿ ತಗೆಸಲಾಗಿರುತ್ತದೆ ಎಂದರೆ ಸರಿಯಲ್ಲ. ನಿಜವಾಗಲು ಕೃತ್ಯ ನಡೆದ  ಸ್ಥಳಕ್ಕೆ ಹೋಗಿ ಮಹಜರ್ ಮಾಡಿದ್ದರೆ ಪೋಟೊದಲ್ಲಿ ಪೆಟ್ರೋಲ್  ಬಂಕ್   ಮತ್ತು ಅಕ್ಕ  ಪಕ್ಕದ   ಸ್ಥಳಗಳು ಕಾಣಿಸುತ್ತಿದ್ದವು ಎಂದರೆ ಸರಿಯಲ್ಲ. ಅಪಘಾತ ದಲ್ಲಿ  ಆರೋಪಿತರ ವಾಹನವು  ಬಾಗಿಯಾಗದೆ ಇದ್ದರೂ ಸಹ  ಆರೋಪಿತರನ್ನು ಈ ಪ್ರಕರಣದಲ್ಲಿ ಸುಳ್ಳಾಗಿ ಸೇರಿಸಲಾಗಿರುತ್ತದೆ ಎಂದರೆ ಸರಿಯಲ್ಲ. ಆರೋಪಿತರಿಗೂ ಮತ್ತು ಅಪಘಾತಕ್ಕೂ ಯಾವುದೆ ಸಂಬಂದ ಇರುವುದಿಲ್ಲ ಎಂದರೆ ಸರಿಯಲ್ಲ.  ಆರೋಪಿತರ ವಿರುದ್ಧ  ಸುಳ್ಳು ದಾಖಲಾತಿಗಳನ್ನು ಸೃಷ್ಟಿ ಮಾಡಲಾಗಿರುತ್ತದೆ ಎಂದರೆ ಸರಿಯಲ್ಲ.  ಇಲಾಖಾ ಅಂಕಿ ಅಂಶಗೆಳಿಗೋಸ್ಕರ  ಸುಳ್ಳು ಪ್ರಕರಣ ದಾಖಲು ಮಾಡಲಾಗಿದೆ ಎಂದರೆ ಸರಿಯಲ್ಲ. ಸಾಕ್ಷಿದರರು ನನ್ನ ಮುಂದೆ ಯಾವುದೇ ಹೇಳಿಕೆಗಳನ್ನು ಹೇಳಿರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸಾ ಸ ಇ ಒ.,

ಹಿರಿಯ ಸಿ.ಜೆ ಮತ್ತು ಜೆ.ಎಂ.ಎಫ್.ಸಿ.,
ಹೆಚ್.ಡಿ.ಕೋಟೆ